ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	612
ಸದಸ್ಯರ ಹೆಸರು	ಶ್ರೀ ಎನ್.ರವಿಕುಮಾರ್
ಉತ್ತರಿಸುವ ದಿನಾಂಕ	05/03/2021
ಉತ್ತರಿಸುವವರು	ಮಾನ್ಯ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

	ಪ್ರಶ್ನೆಗಳು	ಉತ್ತರ
ಅ	ಕರ್ನಾಟಕ ರಾಜ್ಯ ರೇಷ್ಮೋದ್ಯಮ ಆಯುಕ್ತರ ಕಛೇರಿಯಲ್ಲಿ 19.89 ಕೋಟಿ ರೂಗಳ ಅವ್ಯವಹಾರ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರದ ಆದೇಶ ಸಂಖ್ಯೆ ತೋಇ 113 ರೇಕೃವಿ 2014 ದಿನಾಂಕ 30-03-2015 ರನ್ವಯ ರೂ.15.54 ಕೋಟಿ ಹಾಗೂ ದಿನಾಂಕ:17-10-2015ರ ಸರ್ಕಾರದ ಆದೇಶ ಸಂಖ್ಯೆ ತೋಇ 10 ರೇಕೃವಿ 2015ರ ಅನ್ವಯ ಸಮಗ್ರ ಗಣಕೀಕರಣ ಯೋಜನೆಗಾಗಿ ರೂ.4.35 ಕೋಟಿಗಳನ್ನು ಬಿಡುಗಡೆ ಮಾಡಿದೆ. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿಯಲ್ಲಿ ರೇಷ್ಮೆ ಇಲಾಖೆಗೆ ಬಿಡುಗಡೆಯಾದ ಅನುದಾನ ಒಟ್ಟು ರೂ.19.89 ಕೋಟಿಗಳನ್ನು ಯೋಜನೆಯ ಭವಿಷ್ಯದ ಬಳಕೆಗಾಗಿ ಆರ್ಥಿಕ ಇಲಾಖೆಯ ಸಹಮತಿ ಯೊಂದಿಗೆ GIA ಮುಖಾಂತರ ಸೆಳೆದು ಕರ್ನಾಟಕ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಗೆ (ಕೆ.ಎಸ್.ಎಸ್.ಆರ್.ಡಿ.ಐ) ವರ್ಗಾಯಿಸಲಾಗಿದೆ. ಸದರಿ ಅನುದಾನವನ್ನು ಈ ಕೆಳಕಂಡ ಕಾರ್ಯಕ್ರಮಗಳಿಗೆ ಬಳಸಿಕೊಳ್ಳಲು ಉದ್ದೇಶಿಸಲಾಗಿತ್ತು. 1. ಗೂಡಿನ ಮಾರುಕಟ್ಟೆಗಳ ಉನ್ನತೀಕರಣ, ಬೀಜೋತ್ಪಾದನಾ ಗೂಡು ಮಾರುಕಟ್ಟೆಗಳ ಗಣಕೀಕರಣ. 2. ಸಮಗ್ರ ಗಣಕೀಕರಣ ಯೋಜನೆಗಾಗಿ ಸ್ಥಳ ಸಿದ್ಧತೆ. 3. ಇ-ಗೌವರ್ನೆನ್ಸ್ ಚಟುವಟಿಕೆ 4. ಗೂಡು ಮಾರುಕಟ್ಟೆಗಳ ಗಣಕೀಕರಣ. 5. ಹಿಪ್ಪುನೇರಳೆ ನರ್ಸರಿಗಳ ಉತ್ತೇಜನ. 6. ಬಿದಿರಿನ ಚಂದ್ರಿಕೆಗಳ ಸರಬರಾಜು 7. ಟ್ರೆಂಚಿಂಗ್ ಹಾಗೂ ಮಲ್ಚಿಂಗ್ 8. ಮಣ್ಣಿನ ಆರೋಗ್ಯ ಬಲವರ್ಧನೆ. ಕರ್ನಾಟಕ ರಾಜ್ಯ ರೇಷ್ಮೆ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರ ಕಛೇರಿಯಲ್ಲಿ ರೂ.19.89 ಕೋಟಿಗಳ ಯಾವುದೇ ಅವ್ಯವಹಾರ ನಡೆದಿರುವುದಿಲ್ಲ.

ಆ	ಈ ಮೊತ್ತವು ಬಳಕೆಯಾಗದೆ ಉಳಿತಾಯ ಖಾತೆಯಲ್ಲಿದ್ದರೂ ಭಾರತ ಸರ್ಕಾರಕ್ಕೆ ಬಳಕೆ ಪ್ರಮಾಣ ಪತ್ರವನ್ನು ಯಾವ ಆಧಾರದಲ್ಲಿ ಸಲ್ಲಿಸಲಾಗಿದೆ; ಈ ಕ್ರಮವು ನಿಯಮ ಬಾಹಿರವಲ್ಲವೇ; (ವಿವರ ನೀಡುವುದು)	ಆರ್ಥಿಕ ಇಲಾಖೆಯ ಸಹಮತಿಯೊಂದಿಗೆ ಯೋಜನೆಯ ಭವಿಷ್ಯದ ಬಳಕೆಗಾಗಿ, ಸರ್ಕಾರಿ ಆದೇಶದನ್ವಯ ಸದರಿ ಮೊತ್ತವನ್ನು GIA ಮುಖಾಂತರ ಸೆಳೆದು ಕೆ.ಎಸ್.ಎಸ್.ಆರ್.ಡಿ.ಐ ತಲಘಟ್ಟಪುರ ಇಲ್ಲಿಗೆ ವರ್ಗಾಯಿಸಲು ಸೂಚಿಸಿದಂತೆ ಸದರಿ ಸಂಸ್ಥೆಗೆ ವರ್ಗಾಯಿಸಲಾಗಿದೆ. ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರಿಗೆ ಬಿಡುಗಡೆಯಾದ ಮೊತ್ತವನ್ನು ಖಜಾನೆಯಿಂದ ಹಣ ಸೆಳೆದು ಕೆ.ಎಸ್.ಎಸ್.ಆರ್.ಡಿ.ಐ ನೀಡಲಾಗಿರುತ್ತದೆ. ಅದರಂತೆ ಖಜಾನೆ ವೆಚ್ಚವು ಶೇ.100 ರಷ್ಟಾಗಿರುವ ಹಿನ್ನೆಲೆಯಲ್ಲಿ ಬಳಕೆ ಪ್ರಮಾಣ ಪತ್ರವನ್ನು ನೀಡಲಾಗಿತ್ತು.
ಇ	ಬಳಕೆ ಆಗದ ಮೊತ್ತವನ್ನು ಸರ್ಕಾರಕ್ಕೆ ಆಧ್ಯರ್ಪಣೆ ಮಾಡದಿರಲು ಕಾರಣಗಳೇನು;	ಉದ್ದೇಶಿತ ಕಾರ್ಯಕ್ರಮಕ್ಕೆ ಅವಶ್ಯಕತೆಗೆ ತಕ್ಕಂತೆ ಮೊತ್ತವನ್ನು ಬಳಸುವುದು ಯೋಜನೆಯ ಮೂಲ ಉದ್ದೇಶವಾಗಿದ್ದು, ಈ ಯೋಜನೆಯ ಅನುಷ್ಠಾನದಲ್ಲಿ ಕೆಲವೊಂದು ಅನಿರೀಕ್ಷಿತ ಸಂದರ್ಭಗಳ ಕಾರಣದಿಂದ ಅಂದರೆ, ಟೆಂಡರ್ ಪ್ರಕ್ರಿಯೆ ರದ್ದು, ಮರು ಟೆಂಡರ್ ರದ್ದು, DPR ಪರಿಷ್ಕರಣೆ ಮುಂತಾದವುಗಳಿಂದ ಮುಂದೂಡಲಾಗಿದ್ದ ಹಿನ್ನೆಲೆಯಲ್ಲಿ ಈ ಹಣವನ್ನು ಸರ್ಕಾರಕ್ಕೆ ಆದ್ಯರ್ಪಣೆ ಮಾಡಿರುವುದಿಲ್ಲ ಹಾಗೂ ಪ್ರಸ್ತುತ ಯೋಜನೆಯು ಚಾಲನೆಯಲ್ಲಿರುತ್ತದೆ.
ಈ)	ಸರ್ಕಾರದ ನಿಧಿಯನ್ನು ಸ್ವೀಪ್-ಇನ್, ಸ್ವೀಪ್ ಔಟ್ ಖಾತೆಯಲ್ಲಿಡದೆ ಉಳಿತಾಯ ಖಾತೆಯಲ್ಲಿಟ್ಟಿರು ವುದರಿಂದ ಆದ ರೂ. 110.76 ಲಕ್ಷಗಳ ನಷ್ಟಕ್ಕೆ ಯಾರು ಹೊಣೆಗಾರರು; ಈ ನಷ್ಟವನ್ನು ಸಂಬಂಧಿತ ಅಧಿಕಾರಿಯಿಂದಲೇ ವಸೂಲು ಮಾಡಲು ಕೈಗೊಂಡ ಕ್ರಮಗಳೇನು?	ಕೆ.ಎಸ್.ಎಸ್.ಆರ್.ಡಿ.ಐ ಸಂಸ್ಥೆಗೆ ವಿವಿಧ ಮೂಲ ಗಳಿಂದ ಯೋಜನಗಳ ಅನುಷ್ಠಾನಕ್ಕಾಗಿ ಬಿಡುಗಡೆ ಯಾದ ಮೊತ್ತವನ್ನು ಉಳಿತಾಯ ಖಾತೆಯಲ್ಲಿ ಇರಿಸುವುದು ಸಂಸ್ಥೆಯ ನೀತಿಯಾಗಿದ್ದು,ಉದ್ದೇಶಿತ ಕಾರ್ಯಕ್ರಮಕ್ಕೆ ಅವಶ್ಯಕತೆಗೆ ತಕ್ಕಂತೆ ಮೊತ್ತವನ್ನು ಬಳಸುವುದು ಸಂಸ್ಥೆಯ ಮೂಲ ಉದ್ದೇಶವಾಗಿದ್ದು, ಬಡ್ಡಿಗಳಿಸುವುದಲ್ಲ. ಸಂಸ್ಥೆಯ 49ನೇ ಆಡಳಿತ ಪರಿಷತ್ತಿನ ನಿರ್ಣಯದಂತೆ ಉಳಿತಾಯ ಖಾತೆಯಲ್ಲಿ ತಾತ್ಕಾಲಿಕವಾಗಿ ಇರಿಸಲಾಗಿತ್ತು. ತದನಂತರ, ಸಂಸ್ಥೆಯ 52ನೇಯ ಆಡಳಿತ ಪರಿಷತ್ತಿನಲ್ಲಿ ಸದರಿ ಹಣವನ್ನು ನಿಶ್ಚಿತ ಠೇವಣಿಯಲ್ಲಿ ಇಡಲು ಮಾರ್ಗದರ್ಶನ ನೀಡಲಾಗಿದೆ. ಅದರಂತೆ, ಸದರಿ ಹಣವನ್ನು ನಿಶ್ಚಿತ ಠೇವಣಿಯಲ್ಲಿ ಇಡಲಾಗಿದೆ.

ಸಂಖ್ಯೆ: ರೇಷ್ಮೆ 45 ರೇಕೃವಿ 2021

(ಆರ್. ಶಂಕರ್)
ತೋಟಗಾರಿಕೆ ಮತ್ತು ರೇಷ್ಮೆ ಸಚಿವರು